

# ಟೋಬರ್ ಮೋರಿ ಬಂದರು

**ಕೆನಡಾ ಪ್ರವಾಸ ಹಮ್ಮಿಕೊಂಡರೆ ಈ ಸುಂದರ ಬಂದರು ನಗರವನ್ನು ನೋಡಲು ಮರೆಯಬೇಡಿ. ಅದರಲ್ಲೂ ಫ್ಲವರ್‌ಪಾಟ್ ದ್ವೀಪ ಚೇತೋಹಾರಿ ಅನುಭವವನ್ನು ಕಟ್ಟಿಕೊಡುತ್ತದೆ.**



ಲೈಟ್ ಹೌಸ್



ಫ್ಲವರ್‌ಪಾಟ್ ದ್ವೀಪ

ಕೆನಡಾದ ವಿಶ್ವಪ್ರಸಿದ್ಧ ನಯಾಗರ ಜಲಪಾತವಿರುವ ಒಂಟೇರಿಯೋದ ಪ್ರಮುಖ ಪ್ರೇಕ್ಷಣೀಯ ಸ್ಥಳಗಳಲ್ಲಿ ಟೋಬರ್ ಮೋರಿ ಕೂಡ ಒಂದು.

ಟೋಬರ್ ಮೋರಿ ಒಂದು ಬಂದರು. ಇದು ಜಗತ್ತಿನ ಮೂವತ್ತೈದು ಮಹಾ ಸರೋವರಗಳಲ್ಲಿ ಮೂರನೆಯ ಹ್ಯೂರಾನ್ ಸರೋವರ ಮತ್ತು ಜೋರ್ಜಿಯನ್ ಬೇ ಸರೋವರದ ಸಂಗಮ ಪ್ರದೇಶದಲ್ಲಿದೆ. ಈ ಸಂಗಮ ಪ್ರದೇಶಕ್ಕೆ ಬ್ರೂಸ್ ಪೆನಿನ್ಸುಲಾ ಎಂದು ಹೆಸರು. ಟೋಬರ್ ಮೋರಿ ಕೆನಡಾದ ವಾಣಿಜ್ಯ ನಗರ ಟೊರೊಂಟೊದಿಂದ ಸುಮಾರು 300 ಕಿ.ಮೀ. ದೂರದಲ್ಲಿದೆ. ಒಂದೊಮ್ಮೆ ಇಲ್ಲಿ ಹಡಗುಗಳು ತಂಗುತ್ತಿದ್ದವಂತೆ. ಈಗ ಸರೋವರದ ಆಳ ಕಡಿಮೆಯಾಗಿದ್ದು ಹಡಗುಗಳು ಸ್ವಲ್ಪ ದೂರದಲ್ಲಿಯೇ ನಿಲ್ಲುತ್ತಿವೆ. ಲಾಂಚುಗಳು ಮಾತ್ರ ಓಡಾಡುತ್ತಿವೆ.

ಸುಸಜ್ಜಿತ ಬಂದರುಕಟ್ಟೆ ಹೊಂದಿರುವ ಈ ಬಂದರಿನ ಪಕ್ಕದಲ್ಲಿಯೇ ಒಂದು ವೀಕ್ಷಣಾ ಕೇಂದ್ರವಿದೆ. ಸುಮಾರು112 ಮೆಟ್ಟಿಲುಗಳನ್ನು ಹತ್ತಿ ಅಲ್ಲಿಂದ ಹ್ಯೂರಾನ್ ಸರೋವರ ಜೋರ್ಜಿಯನ್ ಬೇ ಸರೋವರ ಮತ್ತು ಪ್ರಕೃತಿ ಸೌಂದರ್ಯವನ್ನು ನೋಡಬಹುದು. ಇಲ್ಲೊಂದು ವಸ್ತುಸಂಗ್ರಹಾಲಯವಿದೆ. ಬಂದರು ದಂಡೆಯ ಮೇಲೆ ಎರಡನೇ ಮಹಾಯುದ್ಧದಲ್ಲಿ ಮಡಿದ ಯೋಧರ ಸ್ಮಾರಕವೂ ಇದೆ.

ಹ್ಯೂರಾನ್ ಸರೋವರವು 22 ದ್ವೀಪಗಳನ್ನು ಒಳಗೊಂಡಿದ್ದು ಅದರಲ್ಲಿ ಫ್ಲವರ್‌ಪಾಟ್ ದ್ವೀಪವು ಮುಖ್ಯವಾದದ್ದು. ಬಂದರಿನಿಂದ ಫ್ಲವರ್‌ಪಾಟ್ ದ್ವೀಪಕ್ಕೆ 5 ಕಿ.ಮೀ. ದೂರವಿದ್ದು ಲಾಂಚ್‌ನ ವ್ಯವಸ್ಥೆ ಇದೆ. 'ಬೋಟಮ್ ಗ್ಲಾಸ್' ಲಾಂಚ್ ಕೂಡ ಲಭ್ಯ. ಈ ಲಾಂಚ್‌ಗಳ ವಿಶೇಷವೆಂದರೆ ನೀರಿನ ಅಡಿಯಲ್ಲಿರುವ ಅವಶೇಷಗಳನ್ನು ವೀಕ್ಷಿಸಬಹುದು. ಲಾಂಚ್‌ನಲ್ಲಿ ಪಯಣಿಸುವಾಗ ಪ್ರಕೃತಿ ಸೌಂದರ್ಯದ ಜೊತೆ ನೀರಿನ ಅಡಿಯಲ್ಲಿ ಮುಳುಗಿರುವ ಎರಡು ಹಡಗುಗಳ ಅವಶೇಷಗಳನ್ನು ಕಂಡು ಬೆರಗಾದೆವು.

ದ್ವೀಪವು 200 ಹೆಕ್ಟೇರು ವಿಸ್ತೀರ್ಣ ಹೊಂದಿದ್ದು ದಟ್ಟವಾದ ಕಾಡಿನಿಂದ